

# ಕೊರೊನಾ ಪಿಕ್ಚರಲ್ಲಿ ಹೀರೊಗಳೇ ಇಲ್ಲ!

**ಜನರನ್ನು ಕೊರೊನಾ ಬಕಾಸುರನ ಬಾಯಿಗೆ ನೂಕುವಲ್ಲಿ, ಚುನಾವಣಾ ರ್‍ಯಾಲಿಯಷ್ಟೇ ಸ್ಟಾರ್ ನಟರ ಕೊಡುಗೆಯೂ ಇದೆಯಲ್ಲವೇ? ಆ ಪಶ್ಚಾತ್ತಾಪಕ್ಕಾದರೂ ಅವರು ಇಂಥ ದುರ್ಭರ ಸಂದರ್ಭದಲ್ಲಿ ತಮ್ಮ ಜನಪ್ರಿಯತೆಯನ್ನು ಜನರ ಸಹಾಯಕ್ಕೆ ಬಳಸಿಕೊಳ್ಳಬೇಕಿತ್ತಲ್ಲವೇ?**

■ ಪದ್ಮನಾಭ ಭಟ್

ಏರುತ್ತಿರುವ ಕೊರೊನಾ ಪ್ರಕರಣಗಳನ್ನು ಗಮನದಲ್ಲಿಟ್ಟುಕೊಂಡು ಆಗಷ್ಟೇ ಸರ್ಕಾರ ಚಿತ್ರಮಂದಿರಗಳಲ್ಲಿ ಶೇ 50ರಷ್ಟು ಮಾತ್ರ ಪ್ರೇಕ್ಷಕರಿಗೆ ಅನುಮತಿ ಎಂಬ ನಿಯಮವನ್ನು ಪ್ರಕಟಿಸಿತ್ತು. ನಿಯಮ ಇನ್ನೇನು ಹೊರಬಿತ್ತೋ ಇಲ್ಲವೋ, ಚಂದನವನದ ಮೂಲೆ ಮೂಲೆಗಳಿಂದ, ಗುಹೆ–ಗಹ್ವರಗಳಿಂದ, ಕಣಿವೆ–ಗುಡ್ಡಗಳಿಂದೆಲ್ಲ ಒಮ್ಮೆಲೇ ಗರ್ಜನೆ ಕೇಳಿಸಲಾರಂಭಿಸಿತು. 'ಒಂದು ಒಳ್ಳೆಯ ಸಿನಿಮಾವನ್ನು ಕೊಲ್ಲುತ್ತಿದ್ದೀರಿ', 'ಚಿತ್ರರಂಗವನ್ನು ಸಂಕಷ್ಟಕ್ಕೆ ದೂಡುತ್ತಿದ್ದೀರಿ', 'ಕೊರೊನಾಗೆ ಪರಿಹಾರ ಗೊತ್ತಿಲ್ಲ; ಆದರೆ ಹಸಿವಿಗೆ ಪರಿಹಾರ ಗೊತ್ತಲ್ಲವೇ?', 'ಒಂದು ಸಿನಿಮಾ ಅಂದರೆ ಸಾವಿರಾರು ಜನರಿಗೆ ಅನ್ನ ಕೊಡುತ್ತದೆ. ಇಡೀ ಚಿತ್ರರಂಗ ಕುಸಿದು ಹೋಗುತ್ತದೆ. ಈಗಿಂದೀಗಲೇ ಚಿತ್ರಮಂದಿರದಲ್ಲಿ ಶೇ 100ರಷ್ಟು ಪ್ರೇಕ್ಷಕರಿಗೆ ಅನುಮತಿ ಕೊಟ್ಟು, ಚಿತ್ರರಂಗವನ್ನು ಉಳಿಸಿ', 'ಜನರಿಗೆ ಕೊರೊನಾ ಬಗ್ಗೆ ಅರಿವು ಇದೆ. ಅವರು ಸಾಕಷ್ಟು ಮುನ್ನೆಚ್ಚರಿಕೆ ತೆಗೆದುಕೊಂಡೇ ಚಿತ್ರಮಂದಿರಕ್ಕೆ ಬರುತ್ತಾರೆ' – ಹೀಗೆ ಯಾವ ಸಿನಿಮಾ ಡೈಲಾಗ್‌ಗೂ ಕಡಿಮೆ ಇಲ್ಲದ ಹಾಗೆ ಕನ್ನಡ ಚಿತ್ರರಂಗದ ಹೀರೊಗಳೆಲ್ಲ ಎದ್ದು ತೊಡೆತಟ್ಟಿನಿಂತು ಘೀಳಿಡಲಾರಂಭಿಸಿದ್ದರು. ಅವರ ಆರ್ಭಟಕ್ಕೆ ಹೆದರಿಯೋ, ಒತ್ತಡಕ್ಕೆ ಮಣಿದೋ ಸರ್ಕಾರ ಮತ್ತೆ ನಾಲ್ಕು ದಿನ ಶೇ 100ರಷ್ಟು ಪ್ರೇಕ್ಷಕರಿಗೆ ಅನುಮತಿ ಕೊಟ್ಟಿತ್ತು.

ಇದೆಲ್ಲ ಘಟಿಸಿ ಒಂದು ತಿಂಗಳಾಗಿದೆ ಅಷ್ಟೆ. ಇಡೀ ರಾಜ್ಯದ ಚಿತ್ರಣವೇ ಬದಲಾಗಿಹೋಗಿದೆ. ಆಸ್ಪತ್ರೆಯಲ್ಲಿ ಬೆಡ್ ಸಿಗದೆ ರಸ್ತೆಬದಿಯಲ್ಲಿ ಜನ ಸಾಯುತ್ತಿದ್ದಾರೆ. ಬೆಡ್ ಸಿಕ್ಕವರು ಆಮ್ಲಜನಕದ ಕೊರತೆಯಿಂದ ಉಸಿರುಕಳೆದುಕೊಳ್ಳುತ್ತಿದ್ದಾರೆ. ಸತ್ತವರ ಸುಡಲಿಕ್ಕೂ ಜಾಗವಿಲ್ಲ. ಎಲ್ಲಿ ನೋಡಿದರೂ ಎಲ್ಲಿ ಕೇಳಿದರೂ ಬರೀ ಸಾವು ನೋವಿನ ಆಕ್ರಂದನ. ಯಾವ ಸಿನಿಮಾದಲ್ಲಿಯೂ ಚಿತ್ರಿತವಾದ ದಾರುಣ ಚಿತ್ರಣವೊಂದು ನಮ್ಮ ಬದುಕಿನಲ್ಲಿ ಘಟಿಸುತ್ತಿದೆ.

ಆದರೆ ಕೊರೊನಾ ಎಂಬ ವಿಕೃತ ನಿರ್ದೇಶಕ ಚಿತ್ರಿಸುತ್ತಿರುವ ಈ ಪಿಕ್ಚರಲ್ಲಿ ಹೀರೊಗಳ ಪತ್ತೆಯೇ ಇಲ್ಲ!

ರಾಜ್ಯದಾದ್ಯಂತ ಅಭಿಮಾನಿಗಳ ಸೇರಿಸಿ ವಿಜಯಯಾತ್ರೆ ಮಾಡಿದವರು, ಜಿಲ್ಲೆ ಜಿಲ್ಲೆಗಳಲ್ಲಿ ಹೆಲಿಕ್ಯಾಪ್ಟರಿನಲ್ಲಿ ಇಳಿದು ಜನರ ಗುಂಪಿನ ಜೊತೆ ಸೆಲ್ಫಿ ತೆಗೆದುಕೊಂಡವರು, ಪ್ರೀ ರಿಲೀಸ್ ಇವೆಂಟ್ ಹೆಸರಿನಲ್ಲಿ ಸಾವಿರಾರು ಜನರನ್ನು ಸೇರಿಸಿದವರು, ಚಿತ್ರಮಂದಿರಗಳಲ್ಲಿ, ಜಿಮ್‌ಗಳಲ್ಲಿ ಎಷ್ಟು ಜನ ಬೇಕಾದರೂ ನುಗ್ಗಲು ಅವಕಾಶ ಕೊಡಬೇಕು ಎಂದು ಲಾಜಿಕ್ಕುಗಳನ್ನು ಇಟ್ಟುಕೊಂಡು ವಾದ ಮಾಡಿದವರು, ಚುನಾವಣಾ ರ್‍ಯಾಲಿಗಳಲ್ಲಿ ಜನ ಸೇರಬಹುದು; ಸಿನಿಮಾ ಮಂದಿರಕ್ಕೆ ಜನ ಬರಬಾರದೇ?' ಎಂದು ತರ್ಕದ ಗುರಾಣಿ ಒಡ್ಡಿದವರು... ಎಲ್ಲ ಎಲ್ಲಿದ್ದಾರೆ ಈಗ? ಅವರ ಧ್ವನಿ ಅಡಗಿಸಿದ್ದು ಯಾವ ಶಕ್ತಿ?

ನಿಜ, ಚುನಾವಣಾ ರ್‍ಯಾಲಿಗಳನ್ನು ನಡೆಸಿದ್ದು ಹೇಯ ಮತ್ತು ಅಸೂಕ್ಷ್ಮ ಮನಸ್ಥಿತಿಯ ರಾಜಕಾರಣಿಗಳು. ಆದರೆ ಅವರಷ್ಟೇ ಇಂದಿನ ಪರಿಸ್ಥಿತಿಯಲ್ಲಿ ವಿಜಯಯಾತ್ರೆ ನಡೆಸಿದ ಸ್ಟಾರ್‌ಗಳ ಕೊಡುಗೆಯೂ ಇದೆಯಲ್ಲವೇ? ಆ ಪಾಪಪ್ರಜ್ಞೆಗಾದರೂ ಈ ದುರಂತದ ಸಂದರ್ಭದಲ್ಲಿ ಅವರು ಜನರಿಗೆ ನೆರವಾಗಲು ತಮ್ಮನ್ನು ತೊಡಗಿಸಿಕೊಳ್ಳಬೇಕಾಗಿತ್ತು. ಆದರೆ ಈ ಮಿರಿಮಿರಿ ಮಿನುಗುವ 'ತಾರೆ'ಗಳೋ, ಯಾವುದೋ ಬರ್ತ್‌ಡೇ ಶುಭಾಶಯ, ಸತ್ತವರಿಗೆ ಶ್ರದ್ಧಾಂಜಲಿ, ತಮ್ಮ ಸಿನಿಮಾ ಪ್ರಮೋಷನ್‌ಗಳಲ್ಲೇ ಮುಳುಗಿದ್ದಾರೆ. ಒಬ್ಬ ಬಹುಭಾಷಾ ನಟರಂತೂ ತಾನು



ಶ್ರುತಿ ಹರಿಹರನ್



ಶ್ರದ್ಧಾ ಶ್ರೀನಾಥ್